

ದೀಪಾ ಫಡ್ಕೆ

# ಅಲೆ

ಕೇತಕಿ, ಉಟ್ಟಿದ್ದ ಗಾಢ ನೀಲಿ ಬಣ್ಣದ ಮೈಸೂರು ಸಿಲ್ಕ್ ಸೀರೆಯ ನೆರಿಗೆಗಳನ್ನು ಮತ್ತೆ ಮತ್ತೆ ತೀಡಿದಳು. ಹತ್ತಿಯಂತಿರುವ, ಮೈಯನ್ನು ಅಪ್ಪಿ ಕೂರುವ ಮೈಸೂರು ಸಿಲ್ಕ್ ಅಂದ್ರೆ ಕೇತಕಿಗೆ ಪ್ರಾಣ. ಮುಂದಿದ್ದ ಆಳೆತ್ತರದ ಕನ್ನಡಿ, ಅವಳ ಇನ್ನೂ ಮಾಸದ ಸೌಂದರ್ಯವನ್ನು ಎತ್ತಿ ತೋರಿದಾಗ ಹೆಮ್ಮೆಯಿಂದ ಕಣ್ಣಿನ ಮಿಂಚು ಹೆಚ್ಚಾದಂತಾಯಿತು. ಓಹ್, ಮುಂದಿನ ಶ್ರಾವಣಕ್ಕೆ ನಲವತ್ತೈದು ತುಂಬುತ್ತದೆ. ಎದೆಯೆತ್ತರಕ್ಕೆ ಬೆಳೆದ ಮಗಳು ಆಗಾಗ 'ಮಮ್ಮಾ, ಪ್ಲೀಸ್ ಸೀರೆನೇ ಉಡು. ನೀನು ಡ್ರೆಸ್ ಹಾಕಿದರೆ ನನ್ನಷ್ಟೇ ಯಂಗ್ ಕಾಣ್ತೀಯ. ಫ್ರೆಂಡ್ಸ್ ಎಲ್ಲ ತಮಾಷೆ ಮಾಡ್ತಾರೆ. ನಿಮ್ಮಮ್ಮನೇ ಫೋಟೊದಲ್ಲಿ ಚೆನ್ನಾಗಿ ಕಾಣ್ತಾರೆ ಅಂತ' ಗೋಗರೆಯುತ್ತಿದ್ದುದು ನೆನಪಾಯಿತು. ಸ್ವಲ್ಪ ಅವಳಿಷ್ಟದ ಲಿಪ್‌ಗ್ಲಾಸ್ ಹಚ್ಚಿಕೊಂಡು ತುಟಿಯ ಹೊರಗಿದ್ದನ್ನು ನಾಜೂಕಾಗಿ ತೆಗೆದು, ಕೇತಕಿ ಮತ್ತೊಮ್ಮೆ ಕನ್ನಡಿ ನೋಡಿ ಸಮಾಧಾನದಿಂದ ತನ್ನ ದೊಡ್ಡ ಹ್ಯಾಂಡ್ ಬ್ಯಾಗನ್ನು ಪರಿಶೀಲಿಸಿದಳು.

ಆರ್.ಜಿ. ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್ ಪ್ರಾಯೋಜಕತ್ವದಲ್ಲಿ ನಡೆಯುವ ತಾಳೆಗರಿ